# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೃಷಿ ಭಾಗ್ಯ ಯೋಜನೆಯಡಿ ಬರಪೀಡಿತ ತಾಲ್ಲೂಕುಗಳಿಗೆ ವಿಶೇಷ ಪ್ಯಾಕೇಜ್ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಬಗ್ಗೆ

ಓದಲಾಗಿದೆ:

1. ಸರ್ಕಾರದ ಆದೇಶ ಸಂ: ಕೃಇ 116 ಕೃಯೋಕಾ 2015, ದಿ: 08–01–2016
2. ದಿನಾಂಕ: 11–01–2016 ರಂದು ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಕೃಷಿ ಭಾಗ್ಯ ಯೋಜನೆಯಡಿ ಬರಪೀಡಿತ ತಾಲ್ಲೂಕುಗಳಿಗೆ ವಿಶೇಷ ಪ್ಯಾಕೇಜ್ ಕಾರ್ಯಕ್ರಮದ ಬಗ್ಗೆ ನಡೆದ ಸಭೆಯ ನಡವಳಿಗಳು
3. ಕೃಷಿ ಆಯುಕ್ತರ ಪತ್ರ ಸಂ:ಉಕೃನಿ/ಕೃ.ಭಾ/ವಿ.ಪ್ಯಾ–3/2015–16. ದಿನಾಂಕ:30.01.2016

**ಪ್ರಸ್ತಾವನೆ:**

ಮೇಲೆ(1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಕೃಷಿ ಭಾಗ್ಯ ಕಾರ್ಯಕ್ರಮದ ಅಂಗವಾಗಿ ಕಳೆದ ನಾಲ್ಕು ವರ್ಷಗಳಿಂದ ನಿರಂತರ ಬರಕ್ಕೆ ತುತ್ತಾದ 7 ಜಿಲ್ಲೆಗಳ 23 ತಾಲ್ಲೂಕುಗಳಿಗೆ ವಿಶೇಷ ಪ್ಯಾಕೇಜ್‌ನ್ನು ಅನುಷ್ಠಾನಗೊಳಿಸಲು ಮಂಜೂರಾತಿ ನೀಡಲಾಗಿರುತ್ತದೆ.

ಮೇಲೆ(2) ರಲ್ಲಿ ಓದಲಾದ ದಿ:11–01–2016ರಂದು ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಕೃಷಿ ಭಾಗ್ಯ ಯೋಜನೆಯಡಿ ಬರಪೀಡಿತ ತಾಲ್ಲೂಕುಗಳಿಗೆ ವಿಶೇಷ ಪ್ಯಾಕೇಜ್ ಕಾರ್ಯಕ್ರಮದ ಬಗ್ಗೆ ನಡೆದ ಸಭೆಯಲ್ಲಿ ದಿನಾಂಕ:08–01–2016ರಂದು ಸರ್ಕಾರದಿಂದ ಹೊರಡಿಸಿದ ಆದೇಶದಲ್ಲಿ ಕೆಲವೊಂದು ಘಟಕಗಳನ್ನು ಈಗಾಗಲೇ ಇಲಾಖೆಯ ಇತರೆ ಯೋಜನೆಗಳಲ್ಲಿ ಅನುಷ್ಠಾನಗೊಳಿಸುತ್ತಿರುವುದರಿಂದ ವಿಶೇಷ ಪ್ಯಾಕೇಜ್‌ನಿಂದ ಕೈಬಿಡಲು ಹಾಗೂ ಇತರೆ ಘಟಕಗಳನ್ನು ಪರಿಷ್ಕರಿಸಲು ತೀರ್ಮಾನಿಸಲಾಗಿರುತ್ತದೆ.

ಅದರನ್ವಯ ಮೇಲೆ ಓದಲಾದ (3) ರ ಪ್ರಸ್ತಾವನೆಯಲ್ಲಿ, ಕೃಷಿ ಆಯುಕ್ತರವರು ಕೃಷಿ ಭಾಗ್ಯ ಯೋಜನೆಯಡಿ ಬರಪೀಡಿತ ತಾಲ್ಲೂಕುಗಳಿಗೆ ವಿಶೇಷ ಪ್ಯಾಕೆಜ್ ಕಾರ್ಯಕ್ರಮಕ್ಕೆ ತಿದ್ದುಪಡಿ ಮಾಡಿ ಪರಿಷ್ಕೃತ ಆದೇಶ ಹೊರಡಿಸುವಂತೆ ಕೋರಿರುತ್ತಾರೆ. ಅದರಂತೆ, ಪರಿಷ್ಕೃತ ಆದೇಶವನ್ನು ಸರ್ಕಾರವು ಹೊರಡಿಸಲು ನಿರ್ಧರಿಸಿರುವುದರಿಂದ, ಈ ಆದೇಶ

**ಸರ್ಕಾರದ ಆದೇಶ ಸಂ: ಕೃಇ 116 ಕೃಯೋಕಾ 2015, ಬೆಂಗಳೂರು, ದಿ: 02–02–2016**

**ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ರಾಜ್ಯದಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಸತತವಾಗಿ ಬರಕ್ಕೆ ತುತ್ತಾದ 7 ಜಿಲ್ಲೆಗಳ, 23 ತಾಲ್ಲೂಕುಗಳಿಗೆ ಕೃಷಿ ಭಾಗ್ಯ ಯೋಜನೆಯ ವಿಶೇಷ ಪ್ಯಾಕೇಜ್‌ನಡಿ ಸರ್ಕಾರದ ಆದೇಶ ಸಂ: ಕೃಇ 116 ಕೃಯೋಕಾ 2015, ಬೆಂಗಳೂರು, ದಿ: 08–01–2016 ರಲ್ಲಿ ಘಟಕಗಳನ್ನು ಅನುಷ್ಟಾನಗೊಳಿಸಲು ಮಂಜೂರಾತಿ ನೀಡಿದ ಆದೇಶವನ್ನು ಪರಿಷ್ಕರಿಸಿ, ಈ ಕೆಳಕಂಡಂತೆ ಅನುಷ್ಟಾನಗೊಳಿಸಲು ಸರ್ಕಾರದ ಮಂಜೂರಾತಿ ನೀಡಿ ಆದೇಶಿಸಿದೆ.**

1. **ಬೆಳೆ ಪದ್ಧತಿ ಪ್ರಾತ್ಯಕ್ಷಿಕೆಗಳು:**

**i) ಕೃಷಿ ಬೆಳೆಗಳು:** ಈ ಯೋಜನೆಯಡಿ ಬರುವ ತಾಲ್ಲೂಕುಗಳಲ್ಲಿ ಬೆಳೆಯುವ ಪ್ರಮುಖ ಕೃಷಿ ಬೆಳೆಗಳಿಗೆ ಸುಧಾರಿತ ಬೆಳೆ ಪದ್ಧತಿಗಳನ್ನು ಅಳವಡಿಸುವುದು. ಕೃಷಿ ಬೆಳೆಗಳಾದ ಏಕದಳ ಮತ್ತು ದ್ವಿದಳ ಧಾನ್ಯ ಬೆಳೆಗಳಿಗೆ ಹೆಕ್ಟೇರ್‌ಗೆ ರೂ.5000/– ಗಳಂತೆ ಹಾಗೂ ಎಣ್ಣೆ ಕಾಳು ಮತ್ತು ವಾಣಿಜ್ಯ ಬೆಳೆಗಳಿಗೆ ಹೆಕ್ಟೇರ್‌ಗೆ ರೂ.10000/– ಗಳಂತೆ ಪ್ರೋತ್ಸಾಹಧನವನ್ನು, ಗರಿಷ್ಠ 2 ಹೆಕ್ಟೇರ್‌ವರೆಗೆ ನೀಡುವುದು.

**ii) ತೋಟಗಾರಿಕೆ ಬೆಳೆಗಳು:** ಹಣ್ಣು, ತರಕಾರಿ, ಹೂವು ಬೆಳೆಗಳಿಗೆ ಇಲಾಖಾ ಮಾರ್ಗಸೂಚಿಯನ್ವಯ, ಗರಿಷ್ಠ 1 ಎಕರೆಗೆ ಸಾಮಾನ್ಯ ವರ್ಗದ ರೈತರಿಗೆ ಶೇ. 50 ರ ಹಾಗೂ ಪ.ಜಾತಿ/ಪ.ಪಂಗಡದ ರೈತರಿಗೆ ಶೇ. 90ರ ಸಹಾಯಧನವನ್ನು ನೀಡುವುದು.

**iii) ರೇಷ್ಮೆ ಬೆಳೆಗಳು:** ಹಿಪ್ಪು ನೇರಳೆ ಬೆಳೆಗಳಿಗೆ ಸುಧಾರಿತ ಬೆಳೆ ಪದ್ಧತಿಗಳನ್ನು ಅಳವಡಿಸಿಕೊಂಡು ಬೆಳೆ ಬೆಳೆಯಲು, ಗರಿಷ್ಠ 1 ಹೆಕ್ಟೇರ್‌ಗೆ ಸಾಮಾನ್ಯ ವರ್ಗದ ರೈತರಿಗೆ ಶೇ. 75 ರ ಮತ್ತು ಪ.ಜಾತಿ/ಪ.ಪಂಗಡದ ರೈತರಿಗೆ ಶೇ.90 ರ ಸಹಾಯಧನವನ್ನು ನೀಡುವುದು.

2. **ಒಣ ಬೇಸಾಯ ಪದ್ಧತಿ (Recharge for functional Borewells):** ಖುಷ್ಕಿ ಜಮೀನಿನಲ್ಲಿ ಕೊಳವೆ ಬಾವಿಗಳ ಮರುಪೂರಣಕ್ಕೆ ಉತ್ತೇಜನ ನೀಡುವುದು. ಈ ತಾಲ್ಲೂಕುಗಳಲ್ಲಿ ಕೊಳವೆ ಬಾವಿ ಮರುಪೂರಣಕ್ಕೆ ಸಾಮಾನ್ಯ ವರ್ಗದ ರೈತರಿಗೆ ಶೇ.90 ರ ಹಾಗೂ ಪ.ಜಾತಿ/ಪ.ಪಂಗಡದ ರೈತರಿಗೆ ಶೇ. 95 ರ ಸಹಾಯಧನ ನೀಡುವುದು.

3. **ಸ್ಥಳದಲ್ಲಿಯೆ ಮಣ್ಣಿನ ತೇವಾಂಶ ಸಂರಕ್ಷಣೆ (In-situ moisture conservation):** ಕೃಷಿ ಭಾಗ್ಯ ಯೋಜನೆಯಡಿ ನೀಡಲಾದ ಮಣ್ಣಿನ ತೇವಾಂಶ ಸಂರಕ್ಷಣೆಗೆ ವಿವಿಧ ರಚನೆಗಳನ್ನು ಅಳವಡಿಸುವುದು. ಇದಕ್ಕಾಗಿ, ಸಾಮಾನ್ಯ ವರ್ಗದ ರೈತರಿಗೆ ಶೇ.90 ರ ಹಾಗೂ ಪ.ಜಾತಿ/ಪ.ಪಂಗಡದ ರೈತರಿಗೆ ಶೇ.95 ರ ಸಹಾಯಧನ ನೀಡುವುದು (ಗರಿಷ್ಠ 5 ಹೆಕ್ಟರ್‌ಗೆ ಸೌಲಭ್ಯವನ್ನು ಒದಗಿಸುವುದು).

4. **ನೀರು ಸಂಗ್ರಹಣಾ ರಚನೆ (ಕೃಷಿ ಹೊಂಡ ಪಾಲಿಥೀನ್ ಹೊದಿಕೆ ಸಹಿತ):** ಕೃಷಿ ಭಾಗ್ಯ ಯೋಜನೆಯಡಿ ಶಿಫಾರಸ್ಸು ಮಾಡಿರುವ ವಿವಿಧ ಅಳತೆಗಳ ಕೃಷಿ ಹೊಂಡಕ್ಕೆ ನೀಡುವ ಸಹಾಯಧನ ಸಾಮಾನ್ಯ ವರ್ಗದ ರೈತರಿಗೆ ಶೇ.90 ರ ಹಾಗೂ ಪ.ಜಾತಿ/ಪ.ಪಂಗಡದ ರೈತರಿಗೆ ಶೇ.95 ರ ಸಹಾಯಧನ ನೀಡುವುದು ಹಾಗೂ ಪಾಲಿಥೀನ್ ಹೊದಿಕೆ ಅಳವಡಿಸಲು ಸಹ ಸಾಮಾನ್ಯ ವರ್ಗದ ರೈತರಿಗೆ ಶೇ.90 ರ ಹಾಗೂ ಪ.ಜಾತಿ/ಪ.ಪಂಗಡದ ರೈತರಿಗೆ ಶೇ.95 ರ ಸಹಾಯಧನ ನೀಡುವುದು.

5. **ಡಿಸೇಲ್/ಸೋಲಾರ್ ಪಂಪಸೆಟ್:** ಕೃಷಿ ಹೊಂಡದಲ್ಲಿ ಸಂಗ್ರಹಣೆಯಾದ ನೀರನ್ನು ಬಳಸಿಕೊಳ್ಳಲು 3 ರಿಂದ 5 ಹೆಚ್.ಪಿ. ಸಾಮರ್ಥ್ಯದ ಡೀಸಲ್ ಪಂಪ್‌ಸೆಟ್‌ನ್ನು ಸಾಮಾನ್ಯ ವರ್ಗದ ರೈತರಿಗೆ ಶೇ.75 ರ ಹಾಗೂ ಪ.ಜಾತಿ/ಪ.ಪಂಗಡದ ರೈತರಿಗೆ ಶೇ.90 ರ ಸಹಾಯಧನ ನೀಡುವುದು. ಸೋಲಾರ್ ಪಂಪ್‌ಸೆಟ್‌ಗೆ (2 ಹೆಚ್.ಪಿ) ಸಾಮಾನ್ಯ ವರ್ಗದ ರೈತರಿಗೆ ಶೇ.50 ರ ಹಾಗೂ ಪ.ಜಾತಿ/ಪ.ಪಂಗಡದ ರೈತರಿಗೆ ಶೇ. 90ರ ಸಹಾಯಧನ ನೀಡುವುದು.

6. **ತುಂತುರು / ಹನಿ ನೀರಾವರಿ:** ಬೆಳೆಗಳಿಗೆ ಸಂದಿಗ್ಧ ಹಂತಗಳಲ್ಲಿ ರಕ್ಷಣಾತ್ಮಕ ನೀರಾವರಿಗಾಗಿ ಬಳಸಿಕೊಳ್ಳಲು ರೈತರಿಗೆ ಗರಿಷ್ಠ 2.0 ಹೆಕ್ಟೇರ್ ಪ್ರದೇಶಕ್ಕೆ ಬೇಕಾಗುವ ಲಘು ನೀರಾವರಿ ಘಟಕಗಳನ್ನು (Fertigation) ಒದಗಿಸಬಹುದಾಗಿದೆ. ಇಲಾಖೆಯ ಮಾರ್ಗಸೂಚಿಯನ್ವಯ ಎಲ್ಲಾ ವರ್ಗದ ರೈತರಿಗೆ ಶೇ.90 ರ ಸಹಾಯಧನ ನೀಡುವುದು.

7. **ನೆರಳು ಮನೆ/ ಪರದೆ, ಪಾಲಿಮನೆ/ ಹಸಿರು ಮನೆ:** ಇಲಾಖಾ ಮಾರ್ಗಸೂಚಿಯಂತೆ ಕಾರ್ಯಕ್ರಮ ಅನುಷ್ಠಾನ ಮಾಡುವುದು. ನೆರಳು ಮನೆ/ ಪರದೆ, ಪಾಲಿಮನೆ/ ಹಸಿರು ಮನೆ ನಿರ್ಮಿಸಲು ಸಾಮಾನ್ಯ ವರ್ಗದ ರೈತರಿಗೆ ಶೇ.75 ರ ಹಾಗೂ ಪ.ಜಾತಿ/ಪ.ಪಂಗಡದ ರೈತರಿಗೆ ಶೇ. 90 ರ ಸಹಾಯಧನ ನೀಡುವುದು.

8. **ರೇಷ್ಮೆ ಕೃಷಿ (ಸಾಕಾಣಿಕೆ ಮನೆ):** ಇಲಾಖೆಯ ಮಾರ್ಗಸೂಚಿಯಂತೆ ಸಾಮಾನ್ಯ ವರ್ಗದ ರೈತರಿಗೆ ಶೇ.75 ರ ಹಾಗೂ ಪ.ಜಾತಿ/ಪ.ಪಂಗಡದ ರೈತರಿಗೆ ಶೇ.90 ರ ಸಹಾಯಧನ ನೀಡುವುದು.

9. **ಪಶು ಸಂಗೋಪನೆ ಚಟುವಟಿಕೆಗಳು:** ಇಲಾಖೆಯ ಮಾರ್ಗಸೂಚಿಯಂತೆ ಪಶುಸಂಗೋಪನಾ ಘಟಕಗಳು (ಹಸು / ಕುರಿ/ಮೇಕೆ/ಕೋಳಿ/ಹಂದಿ) ಸಾಕಾಣಿಕೆಗೆ ಹಾಗೂ ಮೇವು ಕತ್ತರಿಸುವ ಯಂತ್ರಗಳ (Chaff cutter) ವಿತರಣೆಗೆ, ಸಾಮಾನ್ಯ ವರ್ಗದ ರೈತರಿಗೆ ಶೇ.50 ರ ಹಾಗೂ ಪ.ಜಾತಿ/ಪ.ಪಂಗಡದ ರೈತರಿಗೆ ಶೇ.75 ರ ಸಹಾಯಧನ ನೀಡುವುದು.

ಮುಂದುವರೆದು, ಕೃಷಿ ಭಾಗ್ಯ ಯೋಜನೆಯಡಿ ಲಭ್ಯವಿರುವ ಅನುದಾನವನ್ನು ವಿಶೇಷ ಪ್ಯಾಕೇಜ್ ಅಡಿ ಒಳಪಡುವ 7 ಜಿಲ್ಲೆಗಳ 23 ತಾಲ್ಲೂಕುಗಳಿಗೆ ಉಪಯೋಗಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ,

ಆರ್. ಎಸ್. ಶಿವಕುಮಾರ್ 2/2/16

(ಆರ್. ಎಸ್. ಶಿವಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ).

ಇವರಿಗೆ:-

1) ಪ್ರಧಾನ ಮಹಾಲೇಖಪಾಲರು, (ಸಾಮಾನ್ಯ & ಸಾಮಾಜಿಕ ಘಟಕಗಳ ಲೆಕ್ಕಪರಿಶೋಧನೆ ಇತ್ಯಾದಿ) ಕರ್ನಾಟಕ, ಹೊಸ ಕಟ್ಟಡ, ಪಿ.ಬಿ. ನಂ. 5398, ಬೆಂಗಳೂರು –01.
2) ಪ್ರಧಾನ ಮಹಾಲೇಖಪಾಲರು, (ಲೆಕ್ಕಪತ್ರ ಮತ್ತು ಹಕ್ಕುದಾರಿ) ಕರ್ನಾಟಕ, ಹೊಸ ಕಟ್ಟಡ, ಪಿ.ಬಿ. ನಂ. 5398, ಬೆಂಗಳೂರು –01.
3) ಮಹಾಲೇಖಪಾಲರು (ಎ ಮತ್ತು ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂ: 5329, ಬೆಂಗಳೂರು–01
4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧ ಆಯುಕ್ತರು, ವಿಧಾನಸೌಧ, ಬೆಂಗಳೂರು
5) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
6) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಹಕಾರ ಇಲಾಖೆ
7) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ
8) ಸರ್ಕಾರದ ಪ್ರಧಾನ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ
9) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
10) ಆಯುಕ್ತರು / ನಿರ್ದೇಶಕರು ಕೃಷಿ ಇಲಾಖೆ.
11) ಆಯುಕ್ತರು / ನಿರ್ದೇಶಕರು ಜಲಾನಯನ ಅಭಿವೃದ್ಧಿ ಇಲಾಖೆ
12) ಆಯುಕ್ತರು / ನಿರ್ದೇಶಕರು, ರೇಷ್ಮೆ ಇಲಾಖೆ
13) ನಿರ್ದೇಶಕರು, ತೋಟಗಾರಿಕೆ ಇಲಾಖೆ
14) ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರಿಗೆ ಕೃಷಿ ನಿರ್ದೇಶಕರ ಮೂಲಕ
15) ನಿರ್ದೇಶಕರು ಖಜಾನೆ ಇಲಾಖೆ, ಬೆಂಗಳೂರು
16) ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು
17) ಸರ್ಕಾರದ ಉಪಕಾರ್ಯದರ್ಶಿ, ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ
18) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ–4) ವಿಧಾನಸೌಧ, ಬೆಂಗಳೂರು
19) ಸರ್ಕಾರದ ಜಂಟಿ ಕಾರ್ಯದರ್ಶಿ, ಕೃಷಿ ಇಲಾಖೆ ಇವರ ಆಪ್ತ ಸಹಾಯಕರು
20) ಸರ್ಕಾರದ ಉಪಕಾರ್ಯದರ್ಶಿ–2, ಕೃಷಿ ಇಲಾಖೆ ಇವರ ಆಪ್ತ ಸಹಾಯಕರು.]
21) ಶಾಖಾ ರಕ್ಷ ಕಡತ / ಹೆಚ್ಚುವರಿ ಪ್ರತಿಗಳು